ಆದುದರಿಂದ ಇದರ ಬಗ್ಗೆ ಕೇವಲ ಸೂಚನೆ ಇದ್ದರೆ ಸಾಲದು ಇದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಅದು ಆ ವಿಳಂಬಯಿಸಿದ ಮಕ್ಕಳ ಮೇಲೆ ವಿಪರೀತವಾದ ಪರಿಣಾಮವಾಗುತ್ತದೆಂದು ಹೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಈ ಸಂಪ್ರದಾಯ ಬಹಳ ಹಿಂದಿನಿಂದಲೂ ಇದೆ. ಈಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ನಾನು ತಮಗೆ ಹೇಳಿದಂತೆ ದಿ : 11-7-95 ರಲ್ಲಿ ಒಂದು ಆದೇಶವನ್ನು ಕಳುಹಿಸಿ ಈ ರೀತಿಯಾಗಿ ವಿಳಂಬ ಮಕ್ಕಳನ್ನು ಬಿಡಿಸಲೇಬಾರದು ಸರ್ಕಾರಿ ಶಾಲೆಗಳಲ್ಲಿ ಮತ್ತು ಸರ್ಕಾರಿ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಬಾರದೆನ್ನುವ ಈ ಒಂದು ಪದ್ಧತಿಯನ್ನು ಬಿಟ್ಟು ಬಿಡಬೇಕೆಂದು ಆದೇಶವನ್ನು ಕಳುಹಿಸಿದ್ದೇವೆ. ಇದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಬೇಕೆಂಬ ಉದ್ದೇಶದಿಂದಲೇ ನಾವು ಮಾಡಿರುವುದಾಗಿದೆ. ಇದನ್ನು ಯಾರೇ ಹೇಳಿ ನಂತರ ಮಾಡಿರುವುದಲ್ಲ. ಅದನ್ನು ತಿಳಿದುಕೊಂಡೆ ನಾವು ಮಾಡಿರುವುದಾಗಿದೆ.

ಅಧ್ಯಕ್ಷರು : ನಮ್ಮ ಪಕ್ಷದವರು ಅಲ್ಲಿಗೆ ಬಂದಿದೆ. ನಾವು ಕಾರ್ಯಕ್ರಮಗಳಿಗೆ ಹೋಗುತ್ತೇವೆಂದರೆ ಜನರು ಬರುವುದೇ ಇಲ್ಲ. ಆದುದರಿಂದ ಆ ಮಕ್ಕಳನ್ನು ಕರೆದುಕೊಂಡು ಬಂದು ಕೂರಿಸುತ್ತಾರೆ. ಇದಕ್ಕೇನು ಸರ್ಕ್ಯೂಲರ್ ಹೊರಡಿಸುವುದು, ಇದಕ್ಕೆ ನಾವು ಇನ್ನೊಂದು ಸರ್ಕ್ಯೂಲರನ್ನು ಹೊರಡಿಸಬೇಕು. ಯಾರು ಹೋದರೆ ಜನರು ಬರುವುದಿಲ್ಲವೋ ಅವರು ಆ ಕಾರ್ಯಕ್ರಮಗಳಿಗೆ ಹೋಗಬಾರದೆಂದು ಹೊರಡಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತಗೆದುಕೊಳ್ಳುತ್ತೇನೆ.

ಶಾಶ್ವತ ಅನುದಾನ ರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವುದು.

159 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ವಿಚಾರ ಸರ್ಕಾರಕ್ಕೆ ಇದೆಯೇ ?*

ಆ) *ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಡಳಿತ ಹೊಂದಿರುವ ಸಂಸ್ಥೆಗಳನ್ನು ಯಾವ ವರ್ಷದಿಂದ ಅನುದಾನಕ್ಕೆ ಒಳಪಡಿಸಲಾಗಿದೆ ಅದಕ್ಕೆ ಕಾರಣಗಳೇನು ?*

ಇ) *ಕಳೆದ ನಾಲ್ಕು ವರ್ಷಗಳಿಂದ ಅನುದಾನವನ್ನು (ಯಾವುದಾದರೂ) ಸರ್ಕಾರ ನಿಲ್ಲಿಸಿದೆಯೇ ? ಅದಕ್ಕೆ ಕಾರಣಗಳೇನು ?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಪರಿಶಿಷ್ಟಜಾತಿ : ಪರಿಶಿಷ್ಟ ಪಂಗಡದ ಶಿಕ್ಷಣ ಸಂಸ್ಥೆಗಳು ನಡೆಸುವ ಶಾಶ್ವತ ಅನುದಾನ ರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿಲ್ಲ.

ಇ) ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳಾಗಿರುವುದರಿಂದ ಇವುಗಳಲ್ಲಿ ಮಾಡಿಕೊಳ್ಳುವ ನೇಮಕಾತಿಯನ್ನು ಸರ್ಕಾರವು ಅನುಮೋದಿಸುವ ಅಗತ್ಯವಿಲ್ಲ.

ಶ್ರೀ ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೆ, ಈ ರೀತಿ ಅನುಮೋದನೆ ಕೊಡುವಂತಹ ಕಲಸ ಈಗಲೂ ಹಾಲ್ಟಿಯಲ್ಲಿದೆ. ಅನುಮೋದನೆಯನ್ನು ಕೊಡುವುದರಿಂದ ಶಿಕ್ಷಣ ಗುಣಮಟ್ಟ ಇಳಿಯುತ್ತದೆ. ಅಲ್ಲಿರುವಂತಹ ಸಿಬ್ಬಂದಿಗಳ ಶೋಷಣೆಯಾಗುತ್ತಾ ಇದೆ. ಅದಕ್ಕಾಗಿ 10 ವರ್ಷಗಳಿಂದ ಆ ಸಿಬ್ಬಂದಿ ವರ್ಗದವರು ಮುಷ್ಕರಕ್ಕೆ ಇಳಿದಿದ್ದಾರೆ. ಇದಕ್ಕೆ ಸರ್ಕಾರ ಯಾವ ರೀತಿಯಾಗಿ ಆಲೋಚನೆ ಮಾಡಿದೆ?.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಶಾಶ್ವತ ಅನುದಾನ ರಹಿತ ಶಾಲೆಗಳು ಈ ಪದಗಳನ್ನು ಉಪಯೋಗಿಸಿಕೊಂಡು ಸ್ಟಾಂಪ್ ಪೇಪರ್ ಮೇಲೆ ಬರೆಸಿಕೊಂಡು ನಾವು ಅವರಿಗೆ ಹಿಂದಿನಿಂದಲೂ ಅನುಮೋದನೆಯನ್ನು ಕೊಡುತ್ತಾ ಬಂದಿದ್ದೇವೆ. ಆದರೆ ಅರ್ಥ ಶಾಶ್ವತ ಅನುದಾನ ರಹಿತ ಎಂಬ ಬಗ್ಗೆ ವ್ಯಾಖ್ಯಾನ ಮಾಡುವಂತಹ ಅವಶ್ಯಕತೆ ಇಲ್ಲ. ಸರ್ಕಾರ ಯಾರೇ ಬಂದು ಕೇಳಿದರೂ ಅವರಿಗೆ ಯಾವುದೇ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಯಾರ್ಯಾರು ಯಾವ ರೀತಿಯಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೋ ಅದೇ ರೀತಿಯಾಗಿ ಮುಂದುವರೆಸಿಕೊಂಡು ಬರಬೇಕು. ಸರ್ಕಾರದಿಂದ ಯಾವುದೇ ರೀತಿಯ ಸವಲತ್ತುಗಳನ್ನು ಶಾಶ್ವತ ಅನುದಾನ ರಹಿತ ಶಾಲೆಗಳಿಗೆ ಒದಗಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಅನುಮೋದನೆ ಕೊಡುವುದರಿಂದ ರೋಸ್ಟರ್ ಪದ್ಧತಿ ತಪ್ಪಿಹೋಗಿ ಯೋಗ್ಯವಾದಂಥ ಅವಕಾಶಗಳು ತಪ್ಪಿಹೋಗುವುದರಿಂದ ಸರ್ಕಾರ ಇದರ ಬಗ್ಗೆ ಪುನರ್ ಆಲೋಚಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ರೋಸ್ಟರಿಗೂ, ಅನುದಾನ ರಹಿತ ಶಾಲೆಗೂ ಮತ್ತು ಸರ್ಕಾರಕ್ಕೂ ಯಾವುದೇ ರೀತಿಯಾದಂತಹ ಸಂಬಂಧವಿಲ್ಲ. ನಾವೇನಾದರೂ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯು ಮಾನ್ಯ ಸದಸ್ಯರು ಹೇಳಿದಂತೆ ಸರಿಯಾಗುತ್ತದೆ. ಆದರೆ ನಾವು ಶಾಶ್ವತ ಅನುದಾನ ರಹಿತವಾದ ಶಾಲೆಗಳಿಗೆ ಯಾವುದೇ ರೀತಿಯ ಅನುದಾನವನ್ನು ಕೊಡುತ್ತಿಲ್ಲ. ಆದುದರಿಂದ ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಚಂದ್ರಶೇಖರ್ ನಾಯಕ್ : ಇದು ರಾಜ್ಯಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಇದರಲ್ಲಿ ರೋಸ್ಟರ್ ಪದ್ಧತಿ ತಪ್ಪಿಹೋಗುವುದರಿಂದ ಎಸ್.ಸಿ, ಯ ಯೋಗ್ಯವಾದಂತಹ ಅಭ್ಯರ್ಥಿಗಳಿಗೆ ಅಲ್ಲಿ ಅವಕಾಶವಿಲ್ಲದೇ ಇದೆ.

ಅಧ್ಯಕ್ಷರು : ಆಗಲಿ, ಮಾನ್ಯ ಚಂದ್ರಶೇಖರ್ ನಾಯಕ್‌ರವರೆ, "ಮೂಳೆ ಸೀಳಿಗೆ ಮೊಣಕೈ

ನಾಯಕನಾಮ ಏನು ಅಪ್ಪಣೆ" ಎಂದು ಅವರು ಅನುದಾನವನ್ನು ಪಡೆದುಕೊಳ್ಳುವ ಮೇಲೆ ಅದು ಹೇಗೆ ಸರ್ಕಾರದ ಹತೋಟಿಗೆ ಬರುತ್ತದೆ?

ಶ್ರೀ ಚಿಲ್ಲರೆಪಲ್ಲಿ ನಾಯಕ್ : ಅನುದಾನ ಕೊಡುವಾಗ ಈ ಪದ್ಧತಿ ಬರುತ್ತದೆ?

ಅಧ್ಯಕ್ಷರು : ಅನುದಾನ ಕೊಡುವಾಗ ಅದು ಆಟೊಮ್ಯಾಟಿಕ್ ಆಗಿ ಕೊಡುತ್ತಾರೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ಎಸ್.ಸಿ. ಎಸ್.ಟಿ. ರೋಸ್ಟರ್ ಸಿಸ್ಟಂ ಎಲ್ಲಾ ಸುಳ್ಳು. ನಾವು ಮಿನಿಸ್ಟರ್ ಹತ್ತಿರ ಹೋಗಿ ಹೇಳಿದ್ದೇವೆ. I have brought it to the notice of the Minister. For example : In the name of Dr. Baba Saheb Ambedkar Higher Secondary School (People's Education) KGF, out of 53 teachers only one Scheduled Caste teacher is there. It is an aided institution. Goverment is aware of this.

MR. SPEAKER : It is a very serious matter. ಅದರ ಬಗ್ಗೆ ಮಾಹಿತಿ ತರಿಸಿ ನೋಡುತ್ತಾರೆ.

ಶ್ರೀ ಜಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಶಾಶ್ವತ ಅನುದಾನ ರಹಿತ ಶಾಲೆಗಳ ವಿಷಯವನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಅವುಗಳಿಗೆ ಅನುದಾನ ಕೊಡುವುದಕ್ಕೆ ಬರುವುದಿಲ್ಲ. ಆ ಷರತ್ತಿನ ಮೇಲೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರೂ ಮಾನ್ಯ ಮಂತ್ರಿಯವರು ಹಿರಿಯರು, ಅನುಭವಸ್ಥರು ಇದ್ದಾರೆ. ಇದರ ದುಷ್ಪರಿಣಾಮ ಯಾರಮೇಲೆ ಆಗುತ್ತಾ ಇದೆ.ಬಿಪ್ಪು ನಿರುದ್ಯೋಗಿ ಯುವಕ ಅಲ್ಲಿ ಐವತ್ತು ಸಾವಿರ, ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಉದ್ಯೋಗಕ್ಕೆ ಸೇರಿದ್ದಾನೆ. ಆ ಶಾಲೆಗಳು ಸರಿಯಾಗಿ ನಡೆಯುತ್ತಾ ಇಲ್ಲ. ಮಕ್ಕಳಿಗೆ ಸರಿಯಾಗಿ ಪಾಠಪ್ರವಚನ ನಡೆಯುತ್ತಿಲ್ಲ. ಅವರನ್ನು ಆಲ್ಲಿ ಜೀತದಾಳುಗಳಿಗಿನ ರೀತಿಯಲ್ಲಿ ಕೆಲಸ ಮಾಡಿಸುತ್ತಿದ್ದಾರೆ. ಈ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡುವಂತಹ ಕಾಲದಲ್ಲಿ ಈ ರೀತಿ ಖಾಸಗಿ ಶಾಲೆಗಳನ್ನು ಸರ್ಕಾರ ನಡೆಸುವುದಕ್ಕೆ ಏಕೆ ಪ್ರಯತ್ನ ಪಡಬಾರದು? ಅಥವಾ ಸಾರ್ವಜನಿಕರು ಈ ಶಾಲೆಗಳನ್ನು ನಡೆಸಲು ಮುಂದೆ ಬಂದಾಗ ಅವರಿಗೆ ಬೇಕಾದಂತಹ ಅನುಕೂಲತೆಗಳನ್ನು ಮಾಡಿಕೊಟ್ಟು ಅದು ಸರಿಯಾಗಿ ನಡೆಯುವಂತೆ ಮಾಡಬೇಕು. ಆಕಸ್ಮಾತ್ ಈ ಶಾಲೆಗಳಿಗೆ ಇರಲಿಲ್ಲವೆಂದರೆ ಸರ್ಕಾರ ನಡೆಸುತ್ತಿರಲಿಲ್ಲವೆ? ಇವು ಒಂದು ರೀತಿಯ ಗಾಯಿಕೊಡೆಗಳಂತೆ ಆಗಿದೆ. ಅದರ ಆಗತ್ಯ ಇದೆಯೋ ಇಲ್ಲವೋ, ಶಾಲೆಗಳನ್ನು ಮಂಜೂರು ಮಾಡುವುದು. ಇದರಿಂದ ಶಿಕ್ಷಕರು, ಮಕ್ಕಳು ಇಬ್ಬರೂ ಸಫರ್ ಪಡುತ್ತಿದ್ದಾರೆ. ಇದಕ್ಕೆ ತಾವು ಏನಾದರೂ ಪರಿಹಾರ ಹುಡುಕುತ್ತೀರೋ? ನಾನು ಹೇಳುವುದೇನೆಂದರೆ ಇದಕ್ಕೆ ಏನಾದರೂ ತಮ್ಮಲ್ಲಿ ಮಾಸ್ಟರ್ ಪ್ಲಾನ್ ಬೇಕಲ್ಲಾ! ಜನ ಸಂಖ್ಯೆಯ ಆಧಾರದ ಮೇಲೆ, ಎಷ್ಟು ಹಳ್ಳಿಗಳ ಮಧ್ಯದಲ್ಲಿ ಎಷ್ಟಿರು ಪ್ರೈಮರಿ, ಮಿಡಲ್, ಹೈಸ್ಕೂಲ್‌ಗಳು ಬೇಕೆಂಬುದನ್ನು ನೋಡಬೇಕು. ಯಾರೋ ರಾಜಕೀಯ ಪಕ್ಷದ ಮುಖಂಡರು ಅವರ ಬೇಳೆ ಬೇಯಿಸಿಕೊಳ್ಳುವುದಕ್ಕೋಸ್ಕರ ಈ

ರೀತಿಯಾಗಿ ಶಿಕ್ಷಣವನ್ನು ವ್ಯಾಪಾರ ರೀತಿಯಲ್ಲಿ ಪರಿವರ್ತನೆ ಮಾಡಿಕೊಂಡು ಹೋಗುತ್ತಿದ್ದಾರೆ. ಇದಕ್ಕೆ ಸರ್ಕಾರ ಗಮನಹರಿಸಿ ಈ ಪರಿವರ್ತನೆಯಲ್ಲಿ ಬದಲಾವಣೆಯನ್ನು ತರುವಂಥಾದ್ದು ಇರಬೇಕಲ್ಲಾ!

ಶ್ರೀ ಬಂಡ್ರಕಾಂತ ಜಿ. ಬೆಲ್ಲದ : ಮಾನ್ಯ ಅಧ್ಯಕ್ಷರೆ, ಸಂವಿಧಾನದಲ್ಲಿ ಸರ್ಕಾರವು, ಉಚಿತ ಶಿಕ್ಷಣ ಕೊಡಬೇಕಂದಿದೆ. ಇಲ್ಲಿಯವರೆಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಸರ್ಕಾರವು ಕೊಡಿಬೇಕಾದ್ದು ಅವರ ಕರ್ತವ್ಯ. ಇವತ್ತು ಈ ಎಲ್ಲಾ ಶಿಕ್ಷಣ ಕ್ಷೇತ್ರದಲ್ಲಿ ಅವ್ಯವಹಾರ ಸರ್ಕಾರವು ಈ ನೀತಿಯಿಂದಲೇ ನಡೆದಿದೆ. ದಯವಿಟ್ಟು ಅವರ ಬಗ್ಗೆ ಮಂತ್ರಿಗಳು ತೀವ್ರವಾದ ಗಮನವನ್ನು ಹರಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಶಾಶ್ವತ ಅನುದಾನರಹಿತ ಶಾಲೆಗಳನ್ನು ಪ್ರಾರಂಭ ಮಾಡುವಾಗ ಅವರು ಸರ್ಕಾರವು ಅನುಮತಿಯನ್ನು ಏನು ಕೇಳಲ್ಲ, ಅವರು ಅಲ್ಲಲ್ಲಿ ಪ್ರಾರಂಭ ಮಾಡಿದ್ದಾರೆ. ಸರ್ಕಾರದವರು ಇವರ ಬಗ್ಗೆ ರೋಸ್ಟರ್ ಸಿಸ್ಟಮ್ ಆಗಿರಲಿ, ಏನ್ನಿಲ್ಲಿ ಏನೇನು ಬೇಕಂದು ಕೇಳಿಲ್ಲ, ಇದು ಹಿಂದಿನಿಂದ ನಡೆದಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ, ಈಗ ನಾವು ಅವಶ್ಯಕತೆ ಇದ್ದರೆ ಮಾತ್ರ ಕೊಡುತ್ತೇವೆ ಎಲ್ಲಾದರೂ ಬಹಳ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳು ಇಲ್ಲವೆನ್ನುವ ಪರಿಸ್ಥಿತಿ ಬಂದಾಗ, ಅವರ್ಯಾರಾದರೂ ಕೇಳಿದಾಗ, ಅಲ್ಲಿ ಇನಫ್ರಾಸ್ಟ್ರಕ್ಚರ್, ಸ್ಕೂಲ್ ಬಿಲ್ಡಿಂಗ್ ಮತ್ತು ಪ್ಲೇ ಗ್ರೌಂಡ್ ಇಂತಹವು ಸರಿಯಾಗಿದ್ದರೆ ಮಾತ್ರ ನಾವು ಅಶಾಶ್ವತ ಅನುದಾನರಹಿತ ಆಧಾರದ ಮೇಲೆ ಖಾಸಗಿಯವರಿಗೆ ಅನುಮತಿಯನ್ನು ಕೊಡುತ್ತಿದ್ದೇವೆ. ಕಡ್ಡಾಯ ಶಿಕ್ಷಣ ನಮ್ಮ ಜವಾಬ್ದಾರಿಯಾಗಿರುವುದರಿಂದ ಸರ್ಕಾರದವರೇ ಮಾಡಬೇಕಾದಂಥ ಈ ವಿಷಯವನ್ನು ಒಪ್ಪಿಕೊಳ್ಳಬೇಕಾದಂಥದ್ದು. ನಾವು ಯಾರನ್ನೂ ನೀವು ಅಲ್ಲಿ ಶಾಲೆಗಳನ್ನು ತೆರೆಯಿರಿ, ನಮಗ ಉಪಕಾರ ಮಾಡಿ ಎಂದು ಯಾರನ್ನೂ ಕೇಳಿಲ್ಲ. ಖಾಸಗಿ ಪಾಠಶಾಲೆಗಳನ್ನು ಯಾರು ತೆರೆದಿವಾರೆ, ಅವನ್ನು ಅವರು ತಮ್ಮ ಮನಸ್ಸಿನಂತೆ ತೆರೆದಿರುತ್ತಾರೆಯೇ ಹೊರತು, ನಾವು ನಮ್ಮ ಆಜ್ಞಾನವನ್ನು ಕೊಟ್ಟು ಕಳುಹಿಸಿ ಶಾಲೆಗಳನ್ನು ತೆರೆಯಿರಿ ಎಂದು ಮಾಡಿರತಕ್ಕಂಥ ವ್ಯವಸ್ಥೆಯಲ್ಲ. ಆದರೆ ಈ ಶಾಶ್ವತ ರಹಿತ ಅನುದಾನದಿಂದ ಪ್ರಾರಂಭವಾಗಿರುವ ಶಾಲೆಗಳೇನಿವೆ, ಅದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಅವರಿಗೆ ಯಾವುದೇ ರೀತಿಯ ಸೌಲಭ್ಯ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇನ್ನು ಕೆಲವು ಕಡೆ ತಾವು ಹೇಳಿದ ಹಾಗೆ ಐವತ್ತು ಸಾವಿರ, ಅರವತ್ತು ಸಾವಿರ, ಎಪ್ಪತ್ತು ಸಾವಿರ ರೂಪಾಯಿಗಳನ್ನು ತಗಡುಕೊಂಡು ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಇವತ್ತು ಆ ಶಾಲೆಗೆ ಅನುದಾನ ಸಿಗದೆ ಸಂಬಳವೂ ಸಿಗುತ್ತಿಲ್ಲ ಮತ್ತು ಶಿಕ್ಷಕರಿಂದ ತಗಡುಕೊಂಡಿರತಕ್ಕ ಹಣವನ್ನೂ ವಾಪಸ್ ಕೊಡುತ್ತಿಲ್ಲ. ಇದು ನಮ್ಮ ಅವಗಾಹನೆಗೆ ಬಂದಿದೆ. ಆದರೆ ಅದರ ಬಗ್ಗೆ ನಾವೇನೂ ಕಾರ್ಯಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲ, ಅವರು ಶಾಲೆಯನ್ನು ಮುಚ್ಚಿಕೊಳ್ಳಬೇಕು ಇಲ್ಲವಿದ್ದರೆ ಅವರವರೇ ನೋಡಿಕೊಳ್ಳಬೇಕು. ಮ್ಯಾನೇಜಮೆಂಟ್ ಮತ್ತು ಯಾರು ಉಪಾಧ್ಯಾಯರು ನೇಮಕವಾಗಿದ್ದಾರೆ, ಅದು ಅವರಿಗೆ ಸಂಬಂಧಪಟ್ಟದ್ದು. ಇದು ಸರ್ಕಾರದ ಅವಗಾಹನೆಗೆ ಬಂದಿಲ್ಲ. ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳತಕ್ಕ

ಜವಾಬ್ದಾರಿಯನ್ನು ಮರೆಸುತ್ತಿರುವುದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಎರಡು ರೀತಿಯ ಸಂಘಗಳು ಈ ಅನುದಾನರಹಿತ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಒಂದು, ಅಧಿಕೃತವಾಗಿ ಯಾವ ಸಂಘ ಸಂಸ್ಥೆಗಳು, ಟ್ರಸ್ಟಿಗಳಿದ್ದಾರೆ ಅವರೂ ಕೂಡ ಪ್ರಾರಂಭ ಮಾಡಿದ್ದಾರೆ, ಎರಡನೆಯದು, ಹೆಚ್ಚಾಗಿ ನಿರುದ್ಯೋಗಿಗಳು ಎಲ್ಲರು ಸಹ ಸೇರಿಕೊಂಡು ಒಂದು ಸಂಘವನ್ನು ಮಾಡಿಕೊಂಡು ಈ ಶಾಲೆಗಳನ್ನು ತೆರೆದಿದ್ದಾರೆ. ಸರಿಯೋ ತಪ್ಪೋ ಇದು ಮೊದಲು ಆಯಿತು. ಈಗ ಸಾವಿರಾರು ಮಕ್ಕಳಿದ್ದಾರೆ, ಸಾವಿರಾರು ನಿರುದ್ಯೋಗಿಗಳು ಇದ್ದಾರೆ, ಇವರಿಗೆ ಪುನರ್ವಸತಿಯನ್ನು ಕಲ್ಪಿಸುವ ದೃಷ್ಟಿಯಲ್ಲಿ ಸರ್ಕಾರದ ನಿಲುವು ಪ್ರಕಟವಾಗಬೇಕು. ಈ ಅನುದಾನದ ಸಂಹಿತೆಯ ಪ್ರಕಾರವೇ ಈಗ ತಾವು ಅನುದಾನವನ್ನು ಕೊಡುವುದಿಲ್ಲವೆಂದು ಹೇಳುವುದಾದರೆ ಏತಕ್ಕೆ ಫೀ ಗ್ರೌಂಡನ್ನು ಕೇಳಬೇಕು? ಕಟ್ಟಡವನ್ನು ಏತಕ್ಕೆ ಕೇಳಬೇಕು? ರೂಸ್ಸರ್ ಇರಬೇಕೆಂದು ಏತಕ್ಕೆ ಕೇಳಬೇಕು? ಅವರನ್ನು ಹಾಗೆಯೆ ಬಿಟ್ಟುಬಿಡಿ. ದಯಮಾಡಿ, ಈಗ ಇಷ್ಟೊಂದು ಸಾವಿರಾರು ಮಕ್ಕಳಿದ್ದಾರೆ, ತಾವು ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ? ಉಪಾಧ್ಯಾಯರುಗಳನ್ನೆಲ್ಲಾ ಎಲ್ಲಿಗೆ ಕಳುಹಿಸಬೇಕು? ಮೊನ್ನೆ ತಾನೆ ನಾವು ಐವತ್ತೊಂಭತ್ತು ಶಾಲೆಗಳನ್ನು ಮಂಜೂರು ಮಾಡಿದ್ದೀರಿ, ಮಂಜೂರು ಮಾಡುವ ಅಗತ್ಯವಿರಲಿಲ್ಲ. ಅನುದಾನವನ್ನು ಕೊಡುವುದಿಲ್ಲವೆಂದು ಗೊತ್ತಿದ್ದರೂ ಕೂಡ ಪುನಃ ಪುನಃ ಶಾಲೆಗಳನ್ನು ತೆರೆಯುವುದಕ್ಕೆ ಅನುಮತಿಯನ್ನು ಕೊಟ್ಟು ಹೊಸ ಸಮಸ್ಯೆಗಳನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕಿಂತ, ತಾವು ಕೊಡುವುದಿಲ್ಲವೆನ್ನುವ ಒಂದು ನಿರ್ಧಾರಕ್ಕೆ ಒಂದರೆ ನಮಗೆ ಒಳ್ಳೆಯದಾಗುತ್ತದೆ. ದಯಮಾಡಿ, ಸರ್ಕಾರ ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ತಾವು ಸಹ ಮೊನ್ನೆ, ಆ ಶಿಕ್ಷಕರಲ್ಲಾ ಉಪವಾಸ ಸತ್ಯಾಗ್ರಹ ಕುಳಿತಿದ್ದಾಗ ಭರವಸೆಯನ್ನು ಕೊಟ್ಟು ಬಂದಿದ್ದೀರಿ. ದಯಮಾಡಿ, ಈ ನಿಟ್ಟಿನಲ್ಲಿ ತಾವು ಅನುದಾನವನ್ನು ಕೊಡುವುದಿಲ್ಲವೆಂದು ಹೇಳಬೇಡಿ, ಯಾರು ಅನುದಾನ ಸಂಹಿತೆಯ ಪ್ರಕಾರ ಶಾಲೆಗಳನ್ನು ನಡೆಸುತ್ತಿದ್ದಾರೆ ಅವರಿಗಾದರೂ, ಅದು ಪರಿಶಿಷ್ಟಜಾತಿಯ ಸಂಸ್ಥೆಯಾಗಿರಲಿ, ಯಾವುದೇ ಸಂಸ್ಥೆಯಾಗಿರಲಿ, ಯಾವುದೇ ಸಂಸ್ಥೆಯಾಗಿರಲಿ, ಅಲ್ಲಿ ನಿರುದ್ಯೋಗಿಗಳೆಲ್ಲಾ ಸೇರಿಕೊಂಡಿದ್ದಾರೆ, ಅಂತಹವರಿಗಾದರೂ ಅನುದಾನ ಕೊಡತಕ್ಕಂಥ ಆಲೋಚನೆಯನ್ನು ದಯಮಾಡಿ, ಮಾನ್ಯ ಸರ್ಕಾರ ಮಾಡಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ. ಜಿ. ಗೋವಿಂದೇಗೌಡ : ಸದ್ಯದ ಪರಿಸ್ಥಿತಿಯಲ್ಲಿ ಈ ಶಾಶ್ವತ ಅನುದಾನರಹಿತ ಶಾಲೆಗಳಿಗೆ ಅನುದಾನವನ್ನು ಕೊಡತಕ್ಕಂಥ ವ್ಯವಸ್ಥೆ ಇಲ್ಲ.

ಶ್ರೀ ವಸಂತ ಬಿ. ಶಾಲಿಯಾನ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸಾವಿರದ ಒಬ್ಬೈನೂರ ಎಂಭತ್ತೇಳು-ಎಂಭತ್ತೆಂಟರಲ್ಲಿ ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ತು ವಾಸಗಿ ಪ್ರೌಢಶಾಲೆಗಳಿಗೆ ಅನುಮತಿ ಸಿಕ್ಕಿದೆ. ಆದೇಶದಲ್ಲಿ ಅನುದಾನಸಹಿತವೆಂದು ಇರಲಿಲ್ಲ. ಹಾಗಿರುವಾಗ ಈ ಎಂಟು ವರ್ಷಗಳಿಂದ ಈ ಪ್ರೌಢಶಾಲೆ ನಡೆಯುತ್ತಿದೆ. ಇದಕ್ಕೆ ಸ್ವಂತ ಕಟ್ಟಡವಿದೆ, ಸ್ವಂತ ಜಮೀನು ಇದೆ, ಒಳ್ಳೆಯ ಉಪಾಧ್ಯಾಯರಿದ್ದಾರೆ, ಶೇಕಡ ನೂರಷ್ಟು ಫಲಿತಾಂಶ ಬರುತ್ತಿದೆ. ಆದುದರಿಂದ ತಾವು

ಅನುದಾನಸಹಿತ ಎಂದು ಆದೇಶ ಕೊಟ್ಟಾಗ, ಈಗ ಅದಕ್ಕೆ ಖತಕ್ಕೆ ಅನುದಾನವನ್ನು ಕೊಡುತ್ತಿಲ್ಲ? ಸರ್ಕಾರ ಇದನ್ನು ಪರಿಶೀಲಿಸಿ. ತಾವು ಈಗಾಗಲೇ ಭಾಷಣದಲ್ಲಿ ನೂರು ಸರ್ಕಾರಿ ಶಾಲೆಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ರಾಜ್ಯದಲ್ಲಿ ಅನೇಕ ಈ ರೀತಿಯ ಶಾಲೆಗಳಿವೆ, ಅವಕ್ಕೆ ಅನುದಾನವನ್ನು ಕೊಡಿಸಿ, ಈಗ ಸರ್ಕಾರ ಹೊಸ ಶಾಲೆಗಳನ್ನು ತೆರೆಯುವಂತಹ ಅವಶ್ಯಕತೆ ಏನಿತ್ತು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಕ್ಕದ ಕನ್ನಡ ಜಿಲ್ಲೆಯ ಈ ರೀತಿ ಖಾಸಗಿ ಶಾಲೆಗಳಿಗೆ ಅನುದಾನವನ್ನು ತಾವು ಕೊಡುತ್ತೀರಾ? ಕೂಡಿದ ಪಕ್ಷದಲ್ಲಿ ನೀವೇ ಸರ್ಕಾರದವರು ಗುತ್ತಿಗೆಗೆ ವಹಿಸಿಕೊಳ್ಳಬೇಕಾಗಿ ನಾನು ನಿಮ್ಮನ್ನು ಕೇಳುತ್ತೇನೆ.

ಶ್ರೀ ಡಿ.ಜಿ. ಗೋವಿಂದಗೌಡ : ಮಾನ್ಯ ಅಧ್ಯಕ್ಷರೆ, ಸಾವಿರದ ಒಂಭೈನೂರು ಎಂಭತ್ತಾರು-ಎಂಭತ್ತೇಳರಿಂದ ಈಚೆಗೆ ಅವರು ಯಾವುದೇ ಖಾಸಗಿ ಶಾಲೆಗಳನ್ನು ಪ್ರಾರಂಭ ಮಾಡಿದರು ಶಾಶ್ವತ ಅನುದಾನರಹಿತವೆಂದೇ ಅನುಮತಿಯನ್ನು ಕೊಟ್ಟರೆತಕ್ಕಂಥದ್ದು. ಅಂತಹವನ್ನಕ್ಕೆ ಅನುದಾನವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ತಾವು ಹತ್ತು ಶಾಲೆಗಳೆರಡು ಹೇಳಿದ್ದೀರಿ, ದಯವಿಟ್ಟು ಅದು ಯಾವ ವರ್ಷದಲ್ಲಿ ಪ್ರಾರಂಭವಾಗಿತ್ತು ಇತ್ಯಾದಿ ವಿವರಗಳನ್ನು ಬರೆದುಕೊಂಡಿ ನೋಡುತ್ತೇನೆ.

ಶ್ರೀ ವಸಂತ. ಬಿ. ಶಾಲೆಯಾನ : ಈಗ ಇದು ತಮ್ಮ ಗಮನಕ್ಕೆ ಬಂದಿದೆ ಹತ್ತು ದಕ್ಷಿಣ ಕನ್ನಡಜಿಲ್ಲೆಯ ಹಿಜ್ಜನ ಶಾಸಕರು ಇದರ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು : ದಯವಿಟ್ಟು ಆ ಮಾಹಿತಿಯನ್ನು ಮಂತ್ರಿಗಳಿಗೆ ಕಳುಹಿಸಿಕೊಡಿ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಶಿಕ್ಷಣ ಇಲಾಖೆಯಲ್ಲಿ, ಬೆಂಗಳೂರಿನ ಎಲ್ಲಾ ಖಾಸಗಿ ಶಾಲೆಗಳಲ್ಲಿ ಒಂದು ಸೀಟು ಬೇಕೆಂದು ಕೇಳಿದರೆ, ಏಂಬತ್ತು ಪರ್ಸೆಂಟ್-ತೊಂಭತ್ತು ಪರ್ಸೆಂಟ್ ಇದ್ದರೆ ಮಾತ್ರ ಸೀಟನ್ನು ಕೊಡುತ್ತೇವೆಂದು ಹೇಳುತ್ತಾರೆ. ಬಡವರು, ಶ್ರೀಮಂತರು, ಸಾರ್ವಜನಿಕರೆಲ್ಲಾ ಅವಾಗ ಸರ್ಕಾರಿ ಶಾಲೆಗೆ ಸೇರಿಸಬೇಕಾದ ಈ ಏಂಬತ್ತು ಪರ್ಸೆಂಟ್ ಇದ್ದ ಮಕ್ಕಳನ್ನು ಮಾತ್ರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಏಂಬತ್ತು ಪರ್ಸೆಂಟ್ ಇದ್ದವರಿಗೆ ಮಾತ್ರ ಸೀಟು ಕೊಟ್ಟರೆ, ಅದೇ ಸರ್ಕಾರ ಶಾಲೆಗಳಲ್ಲಿ ಎಷ್ಟೇ ಪರ್ಸೆಂಟ್ ತೆಗೆದುಕೊಂಡ ಮಕ್ಕಳು ಓದಬಹುದೆಂದು ಸರ್ಕಾರ ಆಜ್ಞೆ ಮಾಡಿದೆ. ಅದೇ ರೀತಿ ಖಾಸಗಿ ಶಾಲೆಯವರು ಕೂಡ ಮೂವತ್ತು ಪರ್ಸೆಂಟ್ ಇರಲಿ, ನಲವತ್ತು ಪರ್ಸೆಂಟ್ ಇರಲಿ, ಐವತ್ತು ಪರ್ಸೆಂಟ್ ಇರಲಿ, ಅಲ್ಪಸ್ವಲ್ಪ ಸೀಟನ್ನು ಕೊಡುವಂತಹ ಆಜ್ಞೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಹಾಗಯೇ ಸರ್ಕಾರಕ್ಕೆ ಹೇಳುವ ಅಧಿಕಾರ ಇದ್ದು. ಖಾಸಗಿ ಶಾಲೆಯವರು ಕೂಡ ಕಡಿಮೆ ಪರ್ಸೆಂಟೇಜ್ ಬಂದವರಿಗೆ ಸೀಟುಕೊಳ್ಳಬೇಕೆಂದು ಅವರಿಗೆ ಹೇಳಿ ಎಂದು ಹೇಳುತ್ತಿದ್ದಾರೆ. ಹೇಗೆ ಆಗುತ್ತದೆ, ಎಷ್ಟು ಸೀಟು ಇರುತ್ತದೆ ಅಷ್ಟು ಸೀಟುಕೊಳ್ಳುತ್ತಾರೆ. ಕಡಿಮೆ ಸೀಟ್ ಇದ್ದಾಗ ಹೆಚ್ಚಿಂದ ಮೇರೆ ಸೀಟ್ ಕೊಡುತ್ತಾರೆ, ಸ್ಯಾಟಿಂಗಳಲ್ಲಿ ಲಕ್ಷಗಟ್ಟಲೆ ಡೊನೇಷನ್ನನ್ನು ತೆಗೆದುಕೊಳ್ಳುತ್ತಾರೆ.

ಅವಶ್ಯಕತೆ ಪ್ರಾಥಮಿಕ ಅರ್ಹತೆಗಳಿಲ್ಲ. ಒಬ್ಬ ಸ್ವಾಮಿ ಇದ್ದಾರೆ, ಒಂದು ಲಕ್ಷಕ್ಕಿಂತ ಕಡಿಮೆ ತಗೆದುಕೊಳ್ಳುವರೇ ಇಲ್ಲ. ಮಠಾಧಿಪತಿಗಳಿಗೆಲ್ಲಾ ಸ್ಕೂಲಿಗೆ ಲಕ್ಷಗಟ್ಟಲೆ ಹಣಬೇಕು.

ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿ : ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಪಂಗಡದ ಒಂದು ಶಾಲೆಗೆ, ಈಗ್ಗೆ ಹತ್ತು ವರ್ಷಗಳ ಹಿಂದೆ, ಏಳುವರ್ಷದ ನಂತರ ಅನುದಾನವನ್ನು ಕೊಡಲಾಗುವುದೆನ್ನುವ ಆಕರಾರಿನ ಮೇಲೆ ಅನುಮತಿ ಕೊಟ್ಟಿದ್ದು, ಇವತ್ತಿಗೆ ಹತ್ತುವರ್ಷಗಳಾಗಿದ್ದರೂ ಅನುದಾನವನ್ನು ಕೊಟ್ಟಿಲ್ಲ. ಅಲ್ಲಿರುವಂತಹ ಶಿಕ್ಷಕರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಏಳು ವರ್ಷದಲ್ಲಿ ಅನುದಾನ ಸಿಗುತ್ತದೆಂದು ಶಿಕ್ಷಕರಿಂಗೆ ಹಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದಾರೆ, ಅವರಿಗೆ ಮಕ್ಕಳಾಗಿದ್ದಾವೆ, ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಅವರ ಮುಖವನ್ನಾದರೂ ನೋಡಿ, ಏನು ಏಳು ವರ್ಷಗಳ ತರುವಾಯ ಅನುದಾನವನ್ನು ಕೊಡಲಾಗುವುದೆಂದು ಹೇಳಲಾಗಿತ್ತು ಅದಕ್ಕಾದರೂ ಕೊಡಬೇಕೆಂದು ತಮ್ಮ ಮುಖಾಂತರ ಏನಂತೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅಲ್ಲ, ಕನ್ಯಮನ್ನು ಕೊಟ್ಟು ಅವರು ಮಕ್ಕಳು ಮಾಡಿಕೊಂಡಿದ್ದಕ್ಕೆಲ್ಲಾ ಸರ್ಕಾರದ ಮೇಲೆ ಬಂದು ಬಿದ್ದರೆ, ಗೋವಿಂದೇಗೌಡರು ಏನು ಮಾಡುತ್ತಾರೆ, ಅವರು ಮೊದಲೇ ಭಯಸ್ಥರು.

ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿ : ದಯಮಾಡಿ, ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿ ಸಾರ್.

ಅಧ್ಯಕ್ಷರು : ನಾನು ಏನು ಮಾಡಲಿ ಏಂದು ಹೇಳಿ.

ಶ್ರೀ ಡಿ. ಜಿ. ಗೋವಿಂದೇಗೌಡ : ಅಧ್ಯಕ್ಷರೆ, ಸಾವಿರದ ಒಂಭೈನೂರು ಎಂಭತ್ತಾರು-ಎಂಭತ್ತೇಳರಿಂದ ಈಚೆಗೆ ಯಾವ ಪಾಠ ಶಾಲೆ ಪ್ರಾರಂಭವಾಗಿದೆ ಅದಕ್ಕೆ ಶಾಶ್ವತ ಅನುದಾನರಹಿತವ ಆಧಾರವ ಮೇಲೆಯೇ ಅನುಮತಿಯನ್ನು ಕೊಟ್ಟಿರುವಂತಹದ್ದು. ಅದನ್ನು ನಾನು ಮೊದಲು ಎರಡು ಸಾರಿ ಹೇಳಿದ್ದುದು, ಇದು ಮೂರನೆ ಸಾರಿ ಹೇಳುತ್ತಿರುವಂಥದ್ದು, ಶಾಶ್ವತ ಅನುದಾನರಹಿತ ಶಾಲೆಗಳಿಗೆ ಸರ್ಕಾರದಿಂದ ಯಾವುದೇ ರೀತಿಯ ಅನುಕೂಲವನ್ನು ಒದಗಿಸಲಿಕ್ಕೆ ಸಾಧ್ಯವಿಲ್ಲ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ : ಅಧ್ಯಕ್ಷರೆ, ನಾನು ಅನುದಾನ ರಹಿತ ಶಾಲೆಗೆ ಕೊಡಿ ಎಂದು ಹೇಳುತ್ತಿಲ್ಲ, ಅವರು ಏಳು ವರ್ಷದ ನಂತರ ಅನುದಾನ ಕೊಡುತ್ತೇವೆಂದು ಹೇಳಿದ್ದಾರೆ ಅದನ್ನಾದರು ಕೊಡಿ ಎಂದು ನಾನು ಹೇಳುತ್ತೇನೆ.

ತೀರ್ಥಹಳ್ಳಿಯ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆಯ ಬಗ್ಗೆ

160 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಜಯಚಾಮರಾಜೇಂದ್ರ ಆಸ್ಪತ್ರೆಗೆ ಅತ್ಯಧಿಕ ರೋಗಿಗಳು ಬರುತ್ತಿದ್ದು, ಇಲ್ಲಿನ